# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**

■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್.ಶ್ರೀನಾಥ್**

ಕಲೆ: ಮನೋಹರ ಆಚಾರ್ಯ



## ಹರಿಲಾಲ ಅಸ್ತಂಗತ

ವೈದ್ಯರು ತಡೆದು ಹೇಳಿದರು, 'ಹೋಗಲಿ ಬಿಡಿ! ಈಗ ಈ ಬಗ್ಗೆ ಹೇಳುವುದರಲ್ಲಿ ಅರ್ಥವಿಲ್ಲ. ನೀವು ಶವವನ್ನು ನಿಮ್ಮ ವಶಕ್ಕೆ ತೆಗೆದುಕೊಳ್ಳುವುದಾದರೆ...'

ಕೇಶವಲಾಲರು ಮತ್ತು ಸುರೇಂದ್ರರು ಇಬ್ಬರಿಗೂ ದಿಕ್ಕೇ ತೋಚದಂತಾಯಿತು. ಈ ವೈದ್ಯರು ಮಿಸ್ಟರ್ ಹೆಚ್.ಎಂ. ಗಾಂಧಿಯವರನ್ನು ರೋಗಿ ರೂಪದಲ್ಲಿ ಮಾತ್ರ ತಿಳಿದಿದ್ದರು. ಇದಕ್ಕಿಂತ ಹೆಚ್ಚು ವಿಶೇಷ ಪರಿಚಯ ಅವರಿಗಿರಲಿಲ್ಲ.

ಕೇಶವಲಾಲರ ಕಣ್ಣುಗಳು ತುಂಬಿ ಬಂದವು. ಸುರೇಂದ್ರರು ಅವರ ಬೆನ್ನ ಮೇಲೆ ಕೈಯನ್ನಿಟ್ಟರು.

'ಕೇಶು ಭಾಯಿ! ಹರಿಲಾಲ್ ಬಾಪೂರವರ ಅಂತಿಮ ಸಂಸ್ಕಾರಕ್ಕೆ ನಾವು ಮಾಡಬೇಕಾದ ಕೆಲಸವನ್ನು ಶೀಘ್ರ ಮಾಡೋಣ.' ವೈದ್ಯರು ಮಿಸ್ಟರ್ ಹೆಚ್.ಎಂ. ಗಾಂಧಿಯವರ ಕೇಸ್‌ಪೇಪರ್‌ಗಳನ್ನು ತರಿಸಿ ಅಗತ್ಯ ಮಾಹಿತಿಯನ್ನು ದಾಖಲಿಸಿದರು. ಮೃತ್ಯು ಪ್ರಮಾಣಪತ್ರದಲ್ಲಿದ್ದ ಖಾಲಿ ಕಾಲಂ ತುಂಬಿಸಿದರು. ಸತ್ತವನ ಹೆಸರು ಹರಿಲಾಲ್.

ತಂದೆಯ ಹೆಸರು ಮೋಹನದಾಸ್. ಕುಲದ ಹೆಸರು ಗಾಂಧಿ. ವಯಸ್ಸು ಅರವತ್ತು ವರ್ಷ. ಸಾವಿಗೆ ಕಾರಣ...ಇತ್ಯಾದಿ...ಇತ್ಯಾದಿ... ವೈದ್ಯರು ಈ ರೋಗಿಯನ್ನು ಗುರುತಿಸಿಯೇ ಇಲ್ಲವೆಂಬುದನ್ನು ಕೇಶವಲಾಲರು ಗಮನಿಸಿದರು. ಸತ್ತ ರೋಗಿಯಾಗಿದ್ದ ಹರಿಲಾಲರ ಹೆಸರು ಬಹುಶಃ ವೈದ್ಯರ ಗಮನವನ್ನು ಸೆಳೆಯಲಾರದು. ಆದರೆ ಮೋಹನದಾಸ್ ಗಾಂಧಿ ಎಂಬ ಹೆಸರು ಇನ್ನೂ ಅಷ್ಟು ಹಳೆಯದಾಗಿರಲಿಲ್ಲ. ಒಂದು ವೇಳೆ ವೈದ್ಯರು ಮೋಹನದಾಸ್ ಗಾಂಧಿಯ ಹೆಸರನ್ನು ಕೇಳಿ ಆಶ್ಚರ್ಯದಿಂದ ನಮ್ಮನ್ನು ನೋಡಿದರೆ ಆಗ ಎಂಥ ವಿಕಟ ಪರಿಸ್ಥಿತಿ ಎದುರಾಗುವುದು ಎಂಬುದನ್ನು ಯೋಚಿಸಿಯೇ ಕೇಶವಲಾಲರು ಹೆದರಿದ್ದರು.

'ಡಾಕ್ಟರ್! ನೀವು ಯಾವ ರೋಗಿಯನ್ನು, ಅಸಾಧ್ಯ ಕಾಯಿಲೆಯ ರೋಗಿ ಎಂದು ತಿಳಿದಿರುವಿರೋ, ಆ ವ್ಯಕ್ತಿ ಬೇರಾರೂ ಅಲ್ಲ... ಈಗ್ಗೆ ಐದು ತಿಂಗಳ ಹಿಂದೆಯಷ್ಟೆ ದೇಶದ ಕೋಟ್ಯಂತರ ಜನರು ಅವರಿಗೆ ತಮ್ಮ ತಂದೆಯಂತೆ ಅಂತಿಮ ವಿದಾಯವನ್ನು ಹೇಳಿದ್ದರು; ಅವರೇ ಮೋಹನದಾಸ ಗಾಂಧಿ, ನಮ್ಮ ರಾಷ್ಟ್ರಪಿತ, ಜಗತ್ತಿನ ಮಹಾತ್ಮಾರಾದ ಮೋಹನದಾಸ ಗಾಂಧಿ; ಹರಿಲಾಲ ಅವರ ಜ್ಯೇಷ್ಠ ಪುತ್ರರಾಗಿದ್ದರು.

'ಸಹೋದರರು, ಪುತ್ರರು, ಪುತ್ರಿಯರು, ಅಳಿಯಂದಿರು, ಸೋದರ ಮಾವಂದಿರು ಹೀಗೆ ತುಂಬಿದ ಪರಿವಾರ, ಬಾಪೂರವರ ನೆರಳಾಗಿರುವ ಕಸ್ತೂರಬಾರವರ ಈ ಪುತ್ರನನ್ನು ಎಂದೂ, ಯಾರೂ ಕೇಳಲಿಲ್ಲ, ಇವನನ್ನು ಯಾರೂ ಇಷ್ಟಪಡಲಿಲ್ಲ, ಇವರು ಕಸ್ತೂರಬಾರವರ ಮುದ್ದಿನ ಮಗನಾಗಿದ್ದರು.' ಎಂದು ನಾನು ಯಾವ ಬಾಯಿಯಿಂದ ವೈದ್ಯರಿಗೆ ಹೇಳಲಿ?

ಆದರೆ ವೈದ್ಯರು ಇಂಥ ಯಾವ ಪ್ರಶ್ನೆಗಳನ್ನೂ ಕೇಳಲಿಲ್ಲ. ಅಗತ್ಯ ಮಾಹಿತಿಗಳನ್ನು ದಾಖಲಿಸಿ ಅವರು ಮೃತ್ಯು ಪ್ರಮಾಣ ಪತ್ರವನ್ನು ತಯಾರಿಸಿದರು. ಕೇಶವಲಾಲರ ಮುಖ ಮತ್ತೊಮ್ಮೆ ಬಾಡಿತು. ಸ್ವಲ್ಪ ಹೊತ್ತಿಗೆ ಮೊದಲು ಬಿಡುಗಡೆಯ ಭಾವನೆ ಮೂಡಿದ್ದ ಮುಖದಲ್ಲಿ ಈಗ ಕಳವಳ ವ್ಯಾಪಿಸಿತು. ಇನ್ನೂ ಆರು ತಿಂಗಳು ಸಹ ಕಳೆದಿಲ್ಲ, ಆಗಲೇ ಮೋಹನದಾಸ ಗಾಂಧಿಯ ಹೆಸರಿನ ಪರಿಚಯವೇ ಈ ವೈದ್ಯರಿಗಿರಲಿಲ್ಲ. ಕಾಲ ಇಷ್ಟು ಕಠಿಣವೇ? ಇಷ್ಟು ನಿಷ್ಠುರವೇ?

ಕೇಶವಲಾಲರು ಮೃತ್ಯು ಪ್ರಮಾಣ ಪತ್ರವನ್ನು ಹಿಡಿದು ಸುರೇಂದ್ರರೊಂದಿಗೆ ಹೊರಗಿನ ಗಲ್ಲಿಗೆ ಬಂದರು.

'ಕೇಶು ಭಾಯಿ, ಹರಿಲಾಲ್ ಬಾಪೂರವರ ಸಾವಿನ ಸುದ್ದಿಯನ್ನು ಯಾರು ಯಾರಿಗೆ ತಿಳಿಸಬೇಕೋ ಅವರೆಲ್ಲರಿಗೂ...'

'ಸುರೇಂದ್ರಜಿ, ನನ್ನದೊಂದು ಮಾತನ್ನು ಕೇಳುವಿರ?'

'ಏನದು? ಹೀಗೇಕೆ ಹೇಳುತ್ತಿದ್ದೀರ?'

'ನೋಡಿ, ಹರಿಲಾಲ್ ಚಿಕ್ಕಪ್ಪನ ಪರಿಚಯ ಇಲ್ಲಿ ಯಾರಿಗೂ ಇಲ್ಲ. ಅವರ ನಿಜ ಪರಿಚಯವನ್ನು ನಾವಿಲ್ಲಿ ಹೇಳಿಲ್ಲ. ಒಂದು ವೇಳೆ ಅದು ಬಹಿರಂಗಗೊಂಡರೆ, ನಾಳೆ ಜಗತ್ತಿನ ಪತ್ರಿಕೆಗಳಲ್ಲಿ ಈ ಸಾವು ಮತ್ತು ಇದಕ್ಕೆ ಕಾರಣಗಳಾದ ಪರಿಸ್ಥಿತಿಗಳ ಬಗ್ಗೆ ಕುತೂಹಲ ಮತ್ತು ರೋಚಕ ವರದಿಗಳು